ದಿನಾಂಕಃ **05-03-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ವಾದಿ ಪರ ಶ್ರೀ ಹೆಚ್ ಟಿ ಎಸ್ ವಕೀಲರಿಂದ,

1) ನಾನು ಪದವಿ ವ್ಯಾಸಂಗವನ್ನು ಪೂರ್ಣ ಮಾಡಿರುವುದಿಲ್ಲ. ನನ್ನ ತಾತನ ಹೆಸರು ವಕ್ಕಲಕ್ಕಿ ನಂಜೇಗೌಡ ಎಂದರೆ ಸರಿಯಲ್ಲ. ನನ್ನ ತಾತನಿಗೆ ಮೂರು ಜನ ಹೆಂಡತಿಯರು ಎಂದರೆ ಗೊತ್ತಿಲ್ಲ. ನನ್ನ ತಾತನಿಗೆ ಒಟ್ಟು ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಾತನಿಂದ ನನ್ನ ತಂದೆಗೆ ಎಷ್ಟು ಆಸ್ತಿ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿಯ, ತಾಯಿಯ ಹೆಸರು ಗೌರಮ್ಮ. ನನ್ನ ಅಜ್ಜಿ ಗೌರಮ್ಮ ರವರು ನನ್ನ ತಾಯಿಗೆ 2 ಎಕರೆ ಆಸ್ತಿಯನ್ನು ನೀಡಿದ್ದರು ಎಂದರೆ ಸರಿಯಲ್ಲ.

2) ನನ್ನ ತಂದೆ ಜೀವಂತ ಅವಧಿಯಲ್ಲಿ ಗ್ರಾಮ ಪಂಚಾಯತಿಯ ಸದಸ್ಯ ಮತ್ತು ಅಧ್ಯಕ್ಷ ಆಗಿದ್ದರು ಎಂದರೆ ಸರಿ. ನನ್ನ ತಂದೆ ಹೃದಯಾಘಾತದಿಂದ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ 2007 ರಲ್ಲಿ ಮೈಸೂರಿನ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾಯಿ ಈಗ ಜೀವಂತ ಇರುತ್ತಾರೆ. ನನ್ನ ತಾಯಿ ನನ್ನ ಸಹೋದರಿ ಪ್ರಭಾವತಿಯ ಜೊತೆ ಇರುತ್ತಾರೆ. ನಾನು, ನನ್ನ ಸಹೋದರಿ ಮತ್ತು ನನ್ನ ತಾಯಿ ಒಟ್ಟಿಗೆ ಇರುತ್ತೇವೆ ಎಂದರೆ ಸಾಕ್ಷಿ ಮೂರು ನಾಲ್ಕು ವರ್ಷಗಳಿಂದ ಬೇರೆ ಇರುತ್ತೇವೆ ಎಂದು ನುಡಿಯುತ್ತಾರೆ. ನಾನು ನನ್ನ ಸಹೋದರರು ವಿಭಾಗವಾಗಿದ್ದು, ಯಾವಾಗ ವಿಭಾಗ ಆಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಈ ಹಂತದಲ್ಲಿ 2 ಭಾವ ಚಿತ್ರಗಳನ್ನು ತೋರಿಸಿ ನಿಲಿ ಬಣ್ಣದ ಮನೆಯಲ್ಲಿ ನನ್ನ ತಾಯಿ ಮತ್ತು ಸಹೋದರಿ ವಾಸವಾಗಿರುತ್ತಾರೆ ಮತ್ತು ಸಿಮೇಂಟ್ ಬಣ್ಣದಿಂದ ಕೂಡಿದ ಮನೆಯಲ್ಲಿ ನನ್ನ ಅಣ್ಣ ಮತ್ತು ಅತ್ತಿಗೆ ವಾಸವಾಗಿರುತ್ತಾರೆ ಎಂದು ಒಪ್ಪಿಕೊಂಡ ಕಾರಣ ಸದರಿ ಭಾವಚಿತ್ರಗಳನ್ನು ನಿಪಿ-14 ಮತ್ತು 15 ಎಂದು ಗುರುತಿಸಲಾಯಿತು. ನಮ್ಮ ಕುಟುಂಬಕ್ಕೆ ಒಂದು ಮನೆ ಇರುತ್ತದೆ. ನಿಪಿ-14 ಭಾವ ಚಿತ್ರದಲ್ಲಿ ಕಾಣುವ ಮನೆಯನ್ನು 2010-11 ರಲ್ಲಿ ನವೀಕರಣಗೊಳಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ನವೀಕರಣಗೊಳಿಸಲು ಸುಮಾರು 15 ರಿಂದ 20 ಲಕ್ಷ ಸಾಲ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ಮನೆಯ ವ್ಯವಹಾರವನ್ನು ನನ್ನ ತಾಯಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

3) ನನ್ನ ತಂದೆ ತೀರಿಕೊಂಡ ನಂತರ ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿಗಳು ನನ್ನ ತಾಯಿಗೆ ಪೌತಿ ವಾರಸು ಮೂಲಕ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಗೊತ್ತಿಲ್ಲ. ನಿಪಿ-13 ಹಕ್ಕು ಬಿಡುಗಡೆ ಪತ್ರಕ್ಕೆ ನನ್ನ ಸಹೋದರ ಮತ್ತು ಸಹೋದರಿಯರು ಸಹಿ ಮಾಡಿರುವುದಿಲ್ಲ. ನನ್ನ ಸಹೋದರ 2 ನೇ ಪ್ರತಿವಾದಿ ಈ ಹಿಂದೆ ದಾವೆಯಲ್ಲಿ ಕುಟುಂಬದ ಆಸ್ತಿಗಳನ್ನು ದಾವಾ ಇತ್ಯರ್ಥ ಆಗುವವರೆಗೂ ಪರಬಾರೆ ಮಾಡಬಾರದೆಂದು ಆದೇಶ ಆಗಿತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಪ್ರಸನ್ನಕುಮಾರ ರವರಿಗೂ ಸಹ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಸಾಕ್ಷಿ 3 ನನ್ನ ಸ್ನೇಹಿತ ಎಂದರೆ ಸರಿಯಲ್ಲ. ನಮ್ಮ ತಂದೆ ತೀರಿಕೊಂಡ ನಂತರ ನನ್ನ ತಾಯಿ ನನ್ನ ಸಹೋದರ ಮತ್ತು ಸಹೋದರಿಯರು ಮದುವೆ ಕಾರ್ಯಗಳನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ 2016 ರಲ್ಲಿ ಮದುವೆಯಾಗಿರುತ್ತದೆ. ನನ್ನ ಸಹೋದರ ಮತ್ತು ಸಹೋದರಿಯರಿಗೆ ಯಾವಾಗ ಮದುವೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಮಾಡಿರುವ ಸಾಲವನ್ನು ತೀರಿಸುವ ಸಲುವಾಗಿ ನಿಪಿ-01 ಕರಾರು ಪತ್ರವನ್ನು ವಾದಿ ಪರವಾಗಿ ಬರದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆಸ್ತಿಗಳ ಮೇಲೆ ಬ್ಯಾಂಕಿನಿಂದ ಸಾಲ ಪಡೆದುಕೊಂಡಿರುತ್ತೇನೆ. ನಾನು ಬ್ಯಾಂಕಿನಿಂದ ಶೇಕಡ 14 ರಷ್ಟು ಬಡ್ಡಿಗಾಗಿ ಸಾಲ ಪಡೆದುಕೊಂಡಿರುತ್ತೇನೆ. ನಾನು ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

4) ನಾನು ಯಾವುದೇ ಒಂದು ಪತ್ರಕ್ಕೆ ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ನಾನು ಖಾಲಿ ಪತ್ರಗಳಿಗೆ ಸಹಿ ಮಾಡುವ ಹವ್ಯಾಸ ಇಟ್ಟುಕೊಂಡಿರುವುದಿಲ್ಲ ಎಂದರೆ ಸರಿ. ನಾನು ಖಾಲಿ ಪತ್ರಗಳಿಗೆ ಸಹಿ ಮಾಡಿ ಯಾರಿಗೇ ದಾಖಲೆ ನೀಡಿದ್ದೇನೆ ಎಂದು ನನಗೆ ನೆನಪಿರುವುದಿಲ್ಲ. ನನ್ನ ಮತ್ತು ವಾದಿಯ ನಡುವೆ 5 ಲಕ್ಷ ಹಣದ ಬಗ್ಗೆ ಲಖಿತ ದಾಖಲೆ ಆಗಿರುವುದಿಲ್ಲ. ನಾನು ಬ್ಯಾಂಕಿಗೆ ಅರ್ಜಿ ನೀಡಿ ವಾದಿಗೆ ನೀಡಿದ ಚೆಕ್ಕುಗಳನ್ನು ಮಾನ್ಯ ಮಾಡಬಾರೆಂದು ತಿಳಸಿರುವುದಿಲ್ಲ. ಡಿಸೆಂಬರ್ 2016 ರಲ್ಲಿ ವಾದಿಗೆ 5 ಲಕ್ಷ ಹಣ ಮತ್ತು ಬಡ್ಡಿ ಹಣ 3 ಲಕ್ಷ ಪಾವತಿ ಮಾಡಿರುತ್ತೇನೆ. ಆ ಸಮಯದಲ್ಲಿ 500 ಮುಖಬೆಲೆಯ ನೋಟುಗಳನ್ನು ನೀಡಿರುತ್ತೇನೆ. 2016 ರಲ್ಲಿ ನನ್ನ ಬಳಿ ಅಷ್ಟು ಹಣ ಇರಲಿಲ್ಲ ಎಂದರೆ

ಸರಿಯಲ್ಲ. ನಾನು ಪ್ರಸನ್ನ ಕುಮಾರ ರವರ ಮೂಲಕ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಯ ವಿರುದ್ಧ 2 ಚೆಕ್ಕುಗಳು ಮತ್ತು ಅನ್ ಡಿಮ್ಯಾಂಡ್ ಪ್ರಾಮೀಸರಿ ಪತ್ರ ನೀಡಿರುವ ಬಗ್ಗೆ ನ್ಯಾಯಾಲಯದಲ್ಲಿ ಆಗಲಿ ಮತ್ತು ಪೋಲಿಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುವುದಿಲ್ಲ. ನಾನು ಮತ್ತು ಇತರೆ ಪ್ರತಿವಾದಿಗಳ ಒಪ್ಪಿಗೆ ಮೇರೆಗೆ ವಾದಿಗೆ ನಿಪಿ-01 ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಇತರೆ ಪ್ರತಿವಾದಿಗಳನ್ನು ನೊಂದಣಿ ಮಾಡುವ ಕಾಲಕ್ಕೆ ಕರೆದುಕೊಂಡು ಬಂದು ಸಹಿ ಮಾಡಿಸುತ್ತೇವೆ ಎಂದು ನಾನು ನನ್ನ ತಾಯಿ ಒಪ್ಪಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಕರಾರು ಪತ್ರ ಆಗುವ ಕಾಲಕ್ಕೆ ನಮ್ಮ ಸಂಬಂಧಿಕರು ತೀರಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಪ್ರಭಾಕರ ಮತ್ತು ಜಗದೀಶ ರವರ ಸಹಿಗಳನ್ನು ಕರಾರು ಪತ್ರದಲ್ಲಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ